ಮೂಲ ಕಾರಣ. ಸರ್ಕಾರದ ಕೆಲ ಇಲಾಖೆಗಳು ಪರೋಕ್ಷ ಸಹಕಾರವನ್ನೂ ನೀಡುತ್ತಿವೆ. ಸೇವಾ ಸಂಸ್ಥೆಗಳು ನೆರವಿನ ಹಸ್ತ ಚಾಚಿದ್ದಾರೆ. ಹೀಗಾಗಿ ಈ ಕನಸು ನನಸಾಗಿದೆ ಎನ್ನುತ್ತಾರೆ ಸೇವಾ ಸಂಸ್ಥೆಯ ಕಾರ್ಯಾಧ್ಯಕ್ಷ ಮಂಜುನಾಥ್.

ಸೂಕ್ಷ್ಮವಾಗಿ ಗಮನಿಸಿದರೆ ಇದರಲ್ಲಿ ಹಸಿದವರ ಬಗೆಗಿನ ಬರಿಯ ಅತ್ಮಾನುಕಂಪದ ಭಾವನೆ ಕಾಣಿಸುವುದಿಲ್ಲ. ಅನ್ನ ಎಲ್ಲರಿಗೂ ದಕ್ಕಬೇಕಾದ್ದು ಮತ್ತು ಅದನ್ನು ಮಾಡುವುದು ಸಾಧ್ಯವಿದೆ ಎನ್ನುವ ಸಾಮಾಜಿಕ ನ್ಯಾಯ ಪ್ರಮುಖವಾಗಿ ಧ್ವನಿಸುತ್ತದೆ. ಇಂಡಿಯಾದಂಥ ದೇಶದಲ್ಲಿ ಯಾರೂ ಹಸಿವಿನಿಂದ ನರಳಬಾರದು ಎನ್ನುವುದೇ ಸಂವಿಧಾನದ ಆಶಯ. ಇದನ್ನು ಸಾಧ್ಯವಾಗಿಸುವುದು ಪ್ರಜಾಪ್ರಭುತ್ವವಾದಿ ಸರ್ಕಾರದ, ಸಮಾಜದ ಜವಾಬ್ದಾರಿ. ಆದರೆ ಇವೆಲ್ಲ ತೋರಿಕೆಗಾಗಿ ಅಥವಾ ಪ್ರಚಾರಕ್ಕಾಗಿ ಆಗಷ್ಟು ಈಗಷ್ಟು ಯೋಜನೆಗಳ ಮೂಲಕ ಸೋಗು ಹಾಕುವುದು ಮಾತ್ರ ವಿಪರ್ಯಾಸ.

ನಗರದ ಆಸ್ಪತ್ರೆಗೆ ಸಾವಿರಾರು ರೋಗಿಗಳು ಬರುತ್ತಾರೆ. ಜತೆ ಆರೈಕೆಗೆಂದು ಮೂರ್ನಾಲ್ಕು ಜನ ಬಂದೇ ಬರುತ್ತಾರೆ. ಹಾಗೆ ಬಂದವರು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ವಾರ್ಡಗಳಲ್ಲಿ ತಂಗುತ್ತಾರೆ. ಅಂಥವರಿಗೆ ಊಟದ ವ್ಯವಸ್ಥೆ ಮಾಡುವುದು ಮತ್ತು ಅದರ ಖರ್ಚು ವೆಚ್ಚ ನಿಭಾಯಿಸುವುದು ಎರಡೂ ಕಷ್ಟದ ಕೆಲಸ. ಇದನ್ನು ನೀಗಿಸಲೆಂದೇ ಈ ಸೇವಾ ಸಂಸ್ಥೆ ಅಂಥವರಿಗೆ ಉಚಿತ ಅನ್ನ ಸಂತರ್ಪಣೆ ಮಾಡುತ್ತಿದೆ. ಇದರಿಂದ ಸಾವಿರಾರು ಜನರಿಗೆ ಸಹಾಯವಾಗುತ್ತಿದೆ ಎಂದು ಸ್ಥಳೀಯರು ಕೂಡ ಪ್ರಶಂಸೆ ಮಾಡುತ್ತಾರೆ.

ಶಾಲೆ, ಕಾಲೇಜುಗಳಲ್ಲಿ ಓದುವ ಹೆಣ್ಣು ಮಕ್ಕಳಿಗೆಂದು ಕೇವಲ ಎರಡು ರೂಪಾಯಿಗೆ ಹೊಟ್ಟೆ ತುಂಬ ಊಟ ನೀಡಲಾಗುತ್ತಿದೆ. ಇದಕ್ಕೂ ಪ್ರತಿಕ್ರಿಯೆ ಚೆನ್ನಾಗಿದೆ. ಓದಲೆಂದೇ ಹಳ್ಳಿಗಳಿಂದ ನಗರಕ್ಕೆ ಬರುವ ಹೆಣ್ಣು ಮಕ್ಕಳಿಗೆ ನೆರವಾಗುವ ಉದ್ದೇಶ ಇದಾಗಿದೆ ಎಂದೂ ಸಂಘಟಕರು ಹೇಳುತ್ತಾರೆ.

ಎಷ್ಟೋ ಜನರ ಮದುವೆ ಸಮಾರಂಭ, ಜನ್ಮ ದಿನಾಚರಣೆ ಅಥವಾ ಇನ್ನಾವುದೋ ಶುಭ ಕಾರ್ಯಗಳಲ್ಲಿ ಭರ್ಜರಿ ಭೋಜನ ವ್ಯವಸ್ಥೆಯನ್ನು ನಾವು ಕಾಣುತ್ತೇವೆ. ಆಗ ಸಾಕಷ್ಟು ಅನ್ನವನ್ನೂ ಹಾಳುಗೆಡಿಸುವುದೂ ಇದೆ. ಅದರ ಬದಲಿಗೆ ಹಸಿದವರಿಗೆಂದೇ ರೂಪಿಸಿದ ಈ ಅನ್ನ ಸಂತರ್ಪಣೆಗೆ ನೆರವಾಗುವ ಮೂಲಕ ಜೀವನದ ಸಾರ್ಥಕತೆಯನ್ನು ಕಾಣಬಹುದಲ್ಲವೇ ಎನ್ನುವುದು ಪ್ರತಿಷ್ಠಾನದ ಸಂದೇಶ. ಇದಕ್ಕೆ ಹಲವರು ಸ್ಪಂದಿಸುತ್ತಿದ್ದಾರೆ ಕೂಡ.

ಕಳೆದ ರಂಜಾನ್ ಉಪವಾಸ ಆಚರಣೆಯ ಸಂದರ್ಭದಲ್ಲಿ ಮುಸಲ್ಮಾನರಿಗೆಂದೇ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಷೀರ್‌ಖುರ್ಮಾ ವಿತರಿಸಿ ಈ ವರ್ಷದ ಈದ್ ಅನ್ನು ವಿಶೇಷವಾಗಿ ಆಚರಿಸುವ ಮೂಲಕ ಸಂಸ್ಥೆ ಸಮಾಜಕ್ಕೆ ಸಾಮರಸ್ಯದ ಗಟ್ಟಿ ಸಂದೇಶವನ್ನು ನೀಡಿದಂತಾಗಿದೆ.

ಒಟ್ಟಾರೆ ಈ ಸೇವಾ ಕೈಂಕರ್ಯಕ್ಕೆ ತಗುಲುವ ಖರ್ಚು, ವೆಚ್ಚಗಳನ್ನು ಅತ್ಯಂತ ಪಾರದರ್ಶಕವಾಗಿ ನೋಡಿಕೊಳ್ಳುವ ವ್ಯವಸ್ಥೆಯನ್ನು ಸಂಸ್ಥೆ ಹೊಂದಿದೆ. ಯಾವ ಸಂದರ್ಭದಲ್ಲೂ ಲೆಕ್ಕ ನೀಡಲು ಈ ಸಂಸ್ಥೆ ಸಿದ್ಧ. ಅತ್ಯಂತ ಪ್ರಾಂಜಲ ಮನಸ್ಸಿನ ಸೇವಾಕಾಂಕ್ಷಿಗಳು ಇದರ ಹಿಂದಿರುವುದರಿಂದ ಈ ಕೈಂಕರ್ಯ ಜನಪ್ರಿಯಗೊಂಡಿದೆ. ಇದರಿಂದ ಸಂಸ್ಥೆಯ ಕೆಲಸ ಇನ್ನಷ್ಟು ಹಗುರವಾಗಿದೆ. ದಾನಿಗಳ ಸಂಖ್ಯೆಯೂ ಹೆಚ್ಚಿದೆ ಎನ್ನುತ್ತಾರೆ ಮಂಜುನಾಥ್.

ಎಲ್ಲ ಧರ್ಮದ ಮುಖಂಡರು, ಸಮಾಜದ ಗಣ್ಯರು ಮತ್ತು ಇದರ ಬಗ್ಗೆ ಕೇಳಿ ತಿಳಿದವರು ಹಣ ಮತ್ತು ಧವಸ ಧಾನ್ಯಗಳನ್ನು ದಾನವಾಗಿ ನೀಡುತ್ತಿದ್ದಾರೆ. ದಿನದಿಂದ ದಿನಕ್ಕೆ ಇಲ್ಲಿ ಊಟ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿರುವುದು ಇದರ ಮಹತ್ವವನ್ನು ಮತ್ತು ಸಾರ್ಥಕ ಭಾವವನ್ನು ಸಾರಿ ಸಾರಿ ಹೇಳುತ್ತಿದೆ.

ಇಲ್ಲಿ ಸ್ವೀಕರಿಸುವ ಐದು ರೂಪಾಯಿ ಅಥವಾ ಎರಡು ರೂಪಾಯಿ ಶುಲ್ಕ ಸೇವಾ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ಅದರ ನಿರ್ವಹಣೆಗಾಗಿ ಮಾತ್ರ. ಇದರಿಂದ ಯಾವುದೇ ಆರ್ಥಿಕ ಲಾಭವನ್ನು ಸಂಸ್ಥೆ ನಿರೀಕ್ಷಿಸುತ್ತಿಲ್ಲ ಎನ್ನುವುದು ಗಮನಾರ್ಹ ಅಂಶ. ●




Customer Care : 080-26716012, 26716040